# ಚಲನಚಿತ್ರ ಕೆಲಸಗಾರರ ಕಲ್ಯಾಣ ಉಪಕರ ಅಧಿನಿಯಮ, 1981

**(1981ರ ಅಧಿನಿಯಮ ಸಂಖ್ಯೆ 30)**

**[15ನೇ ಮಾರ್ಚ್ 1999ರ ಭಾರತ ರಾಜಪತ್ರದ IXನೇ ಭಾಗದ 1ನೇ ವಿಭಾಗದ 17ನೇ ಸಂಪುಟದ 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 1 ಮತ್ತು 2ನೇ ಪುಟಗಳಲ್ಲಿ ಪ್ರಕಟಿತ]**

**ಪ್ರಕರಣಗಳ ಅನುಕ್ರಮಣಿಕೆ**

**ಪ್ರಕರಣಗಳು :**


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಫೀಚರ್ ಫಿಲಂಗಳ ಮೇಲೆ ಉಪಕರವನ್ನು ವಿಧಿಸುವುದು ಮತ್ತು ಅದರ ಸಂಗ್ರಹಣೆ
4. ಉತ್ಪಾದನಾ ಸುಂಕ ಸಂದಾಯ
5. ಭಾರತದ ಸಂಚಿತ ನಿಧಿಗೆ ಸುಂಕದ ಉತ್ಪನ್ನಗಳನ್ನು ಜಮೆ ಮಾಡುವುದು
6. ವಿನಾಯಿತಿ ಕೊಡಲು ಕೇಂದ್ರ ಸರ್ಕಾರದ ಅಧಿಕಾರ
7. ಉತ್ಪಾದನಾ ಸುಂಕವನ್ನು ಸಂದಾಯ ಮಾಡದೇ ಇರುವುದಕ್ಕಾಗಿ ದಂಡ
8. ಅಧಿನಿಯಮದ ಮೇರೆಗೆ ಬಾಕಿ ಇರುವ ಮೊಬಲಗುಗಳ ವಸೂಲಿ
9. ಸದ್ಭಾವನೆಯಿಂದ ಕೈಗೊಂಡ ಯಾವುದೇ ಕ್ರಮದ ಬಗ್ಗೆ ಸಂರಕ್ಷಣೆ
10. ನಿಯಮ ರಚನಾಧಿಕಾರ.

# ಚಲನಚಿತ್ರ ಕೆಲಸಗಾರರ ಕಲ್ಯಾಣ ಉಪಕರ ಅಧಿನಿಯಮ, 1981

**(1981ರ ಅಧಿನಿಯಮ ಸಂಖ್ಯೆ 3೦)**

**[11ನೇ ಸೆಪ್ಟೆಂಬರ್ 1981]**

ಕೆಲವು ಚಲನಚಿತ್ರ ಕೆಲಸಗಾರರ ಕಲ್ಯಾಣವನ್ನು ಅಭಿವೃದ್ಧಿಪಡಿಸುವ ಚಟುವಟಿಕೆಗಳಿಗೆ ಹಣಕಾಸನ್ನು ಒದಗಿಸುವುದಕ್ಕಾಗಿ ಫೀಚರ್ ಫಿಲಂಗಳ ಮೇಲೆ ಉಪಕರವನ್ನು ವಿಧಿಸುವ ಬಗ್ಗೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತೆರಡನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:–

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಚಲನಚಿತ್ರ ಕೆಲಸಗಾರರ ಕಲ್ಯಾಣ ಉಪಕರ ಅಧಿನಿಯಮ, 1981 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕುದು.

**2. ಪರಿಭಾಷೆಗಳು:–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಚಲನಚಿತ್ರ ಫಿಲಂ" ಎಂಬುದು ಚಲನಚಿತ್ರ ಅಧಿನಿಯಮ, 1952 (1952ರ 37) ರಲ್ಲಿ ಇರುವಂಥದೇ ಅರ್ಥವನ್ನು ಹೊಂದಿರುತ್ತದೆ;

(ಬಿ) "ಫೀಚರ್ ಫಿಲಂ" ಎಂದರೆ, ಫಾರ್ಮ್ಯಾಟ್‌ಸಹಿತ ಮತ್ತು ಕಥಾ ವಸ್ತುವನ್ನು ಹಲವಾರು ಪಾತ್ರಗಳೊಂದಿಗೆ ಹೆಣೆದು ಪ್ರಧಾನವಾಗಿ ಸಂಭಾಷಣೆಗಳ ಮೂಲಕ ತಿಳಿಸಿರುವ ಮತ್ತು ಸಂಪೂರ್ಣವಾಗಿ ನಿರೂಪಣೆಯ, ಅನಿಮೇಷನ್ ಅಥವಾ ಕಾರ್ಟೂನ್ ಚಿತ್ರಣದ ಮೂಲಕ ತಿಳಿಸದಿರುವ, ಕಥೆಯ ಸಹಿತ ಭಾರತದಲ್ಲಿ ಸಂಪೂರ್ಣವಾಗಿ ಅಥವಾ ಭಾಗಶಃ ತಯಾರಿಸಿದ ಪೂರ್ಣ ಪ್ರಮಾಣದ ಚಲನಚಿತ್ರ ಮತ್ತು ಇದರಲ್ಲಿ ಜಾಹೀರಾತು ಫಿಲಂ ಒಳಗೊಳ್ಳುವುದಿಲ್ಲ;

(ಸಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಡಿ) ಫೀಚರ್ ಫಿಲಂಗೆ ಸಂಬಂಧಪಟ್ಟಂತೆ "ನಿರ್ಮಾಪಕ" ಎಂದರೆ–

(i) ಅಂಥ ಫಿಲಂನ ನಿರ್ಮಾಪಕ; ಅಥವಾ

(ii) ಚಲನಚಿತ್ರ ಅಧಿನಿಯಮ, 1952 (1952ರ 37) ರ 4ನೇ ಪ್ರಕರಣದ ಮೇರೆಗೆ ಅಂಥ ಚಲನಚಿತ್ರಕ್ಕೆ ಸಂಬಂಧಿಸಿದಂತೆ ಪ್ರಮಾಣ ಪತ್ರ ಕೋರಿ, ಯಾವನೇ ಇತರ ವ್ಯಕ್ತಿಯು ಅರ್ಜಿಯನ್ನು ಸಲ್ಲಿಸಿರುವಲ್ಲಿ, ಅಂಥ ಇತರ ವ್ಯಕ್ತಿ.

**3. ಫೀಚರ್ ಫಿಲಂಗಳ ಮೇಲೆ ಉಪಕರವನ್ನು ವಿಧಿಸುವುದು ಮತ್ತು ಅದರ ಸಂಗ್ರಹಣೆ.–** (1) ಚಲನಚಿತ್ರ ಕೆಲಸಗಾರರ ಕಲ್ಯಾಣ ಉಪಕರ ಅಧಿನಿಯಮ, 1981ರ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ ನಿರ್ದಿಷ್ಟಪಡಿಸಬಹುದಾದಂತೆ ಪ್ರತಿಯೊಂದು ಫೀಚರ್ ಫಿಲಂನ ಮೇಲೆ ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಮತ್ತು ಇಪ್ಪತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚಿಲ್ಲದ ದರದಲ್ಲಿ ಉತ್ಪಾದನಾ ಸುಂಕವನ್ನು ಉಪಕರವಾಗಿ ವಿಧಿಸತಕ್ಕುದು ಮತ್ತು ವಸೂಲು ಮಾಡತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ವಿಧಿಸಿದ ಉತ್ಪಾದನಾ ಸುಂಕವು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಚಲನಚಿತ್ರಗಳ ಮೇಲೆ ವಿಧಿಸಬಹುದಾದ ಯಾವುದೇ ಉಪಕರದ ಅಥವಾ ಸುಂಕದ ಜೊತೆಗೆ ಇರತಕ್ಕುದು.

**4. ಉತ್ಪಾದನಾ ಸುಂಕ ಸಂದಾಯ.–** (1) ಯಾವುದೇ ಫೀಚರ್ ಫಿಲಂನ ಮೇಲೆ 3ನೇ ಪ್ರಕರಣದ ಮೇರೆಗೆ ವಿಧಿಸಿರುವ ಉತ್ಪಾದನಾ ಸುಂಕವನ್ನು ಅಂಥ ಫಿಲಂನ ನಿರ್ಮಾಪಕನು ಚಲನಚಿತ್ರ ಅಧಿನಿಯಮ, 1952 (1952ರ 37)ರ 4ನೇ ಪ್ರಕರಣದ ಮೇರೆಗೆ ಅಂಥ ಫಿಲಂಗೆ ಸಂಬಂಧಿಸಿದಂತೆ ಪ್ರಮಾಣಪತ್ರ ಕೋರಿ ಅವನು ಅರ್ಜಿಯನ್ನು ಸಲ್ಲಿಸುವಂಥ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಕೇಂದ್ರ ಸರ್ಕಾರಕ್ಕೆ ಸಂದಾಯ ಮಾಡತಕ್ಕುದು:

ಪರಂತು, ಅಂಥ ಚಲನಚಿತ್ರ ನಿರ್ಮಾಪಕನು ಅಂಥ ಫಿಲಂಗೆ ಸಂಬಂಧಿಸಿದಂತೆ ಅವನು ಸಂದಾಯಮಾಡಿರುವ ಸುಂಕದ ಮರುಪಾವತಿಗಾಗಿ ಕೇಂದ್ರ ಸರ್ಕಾರಕ್ಕೆ,–

(ಎ) ಅಂಥ ಫಿಲಂಗೆ ಸಂಬಂಧಿಸಿದಂತೆ ಯಾವುದೇ ಪ್ರಮಾಣಪತ್ರ ನೀಡಿಕೆಯನ್ನು ತಿರಸ್ಕರಿಸುವ ಆದೇಶವನ್ನು, ಚಲನಚಿತ್ರ ಅಧಿನಿಯಮ, 1952ರ 5ಎ ಪ್ರಕರಣದೊಂದಿಗೆ ಓದಿಕೊಂಡ 4ನೇ ಪ್ರಕರಣದ ಮೇರೆಗೆ ಮಾಡಿರುವ, ಮತ್ತು

(ಬಿ) ಅಂಥ ಆದೇಶದ ವಿರುದ್ಧ ಅಪೀಲು ಮಾಡಿಕೊಳ್ಳುವ ಅಥವಾ ಪುನರೀಕ್ಷಣೆಯನ್ನು ಕೋರುವ ಉದ್ದೇಶವು ತನಗೆ ಇಲ್ಲವೆಂಬ ಅಥವಾ ಸಂದರ್ಭಾನುಸಾರ ಸದರಿ ಆದೇಶವನ್ನು ಸದರಿ ಅಧಿನಿಯಮದ ಮೇರೆಗೆ ಅಪೀಲಿನಲ್ಲಿ ಅಥವಾ ಪುನರೀಕ್ಷಣೆಯಲ್ಲಿ ಸ್ಥಿರೀಕರಿಸಲಾಗಿದೆ ಎಂಬ

– ಕಾರಣದ ಮೇಲೆ ಅರ್ಜಿಯನ್ನು ಸಲ್ಲಿಸಬಹುದು:

ಮತ್ತೂ ಪರಂತು, ಆ ಫಿಲಂಗೆ ಸಂಬಂಧಿಸಿದಂತೆ ಹಿಂದಿನ ಪರಂತುಕದ ಮೇರೆಗೆ ಸಂದಾಯ ಮಾಡಿದ ಸುಂಕವನ್ನು ಮರುಪಾವತಿ ಮಾಡಿದ ತರುವಾಯ ಯಾವುದೇ ಫಿಲಂಗೆ ಸಂಬಂಧಿಸಿದಂತೆ ಸದರಿ ಅಧಿನಿಯಮದ ಮೇರೆಗೆ ಯಾವುದೇ ಪ್ರಮಾಣಪತ್ರವನ್ನು ಕೊಟ್ಟಿದ್ದರೆ, ಆ ನಿರ್ಮಾಪಕನು ಹಾಗೆ ಮರುಪಾವತಿ ಮಾಡಿರುವ ಸುಂಕವನ್ನು ಕೇಂದ್ರ ಸರ್ಕಾರಕ್ಕೆ, ಅಂಥ ಪ್ರಮಾಣ ಪತ್ರವನ್ನು ಕೊಟ್ಟಿರುವ ದಿನಾಂಕದಿಂದ ಏಳು ದಿವಸಗಳ ಅವಧಿಯೊಳಗೆ ಮರುಸಂದಾಯ ಮಾಡಲು ಹೊಣೆಗಾರನಾಗಿರತಕ್ಕುದು.

(2) ಪ್ರತಿವರ್ಷಕ್ಕೆ ಶೇಕಡಾ 12ರ ದರದಲ್ಲಿ ಸರಳ ಬಡ್ಡಿಯನ್ನು–

(ಎ) ಅಂಥ ಸುಂಕವನ್ನು ಸಂದಾಯ ಮಾಡಿದ ದಿನಾಂಕದಿಂದ, ಅಂಥ ಮರುಪಾವತಿಯ ದಿನಾಂಕದವರೆಗೆ (1)ನೇ ಉಪ ಪ್ರಕರಣದ ಮೊದಲನೇ ಪರಂತುಕದ ಮೇರೆಗೆ ಯಾವುದೇ ಫಿಲಂಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರವು ಮರುಪಾವತಿ ಮಾಡಿರುವ ಸುಂಕದ ಮೊಬಲಗಿನ ಮೇಲೆ ಅದು ಸಂದಾಯ ಮಾಡತಕ್ಕುದು.

(ಬಿ) (1)ನೇ ಉಪಪ್ರಕರಣದ ಮೊದಲನೇ ಪರಂತುಕದ ಮೇರೆಗೆ ನಿರ್ಮಾಪಕನಿಗೆ ಮರುಪಾವತಿ ಮಾಡಿರುವ ಮತ್ತು ಆ ಉಪ ಪ್ರಕರಣದ ಎರಡನೇ ಪರಂತುಕದ ಮೇರೆಗೆ ಕೇಂದ್ರ ಸರ್ಕಾರಕ್ಕೆ ಅವನು ಮರುಸಂದಾಯ ಮಾಡಿರುವ ಸುಂಕದ ಯಾವುದೇ ಮೊಬಲಗಿನ ಮೇಲೆ ಅಂಥ ಮರುಪಾವತಿಯ ದಿನಾಂಕದಿಂದ ಅಂಥ ಮರುಸಂದಾಯದ ದಿನಾಂಕದವರೆಗೆ ಅವನು ಸಂದಾಯ ಮಾಡತಕ್ಕುದು.

**5. ಭಾರತದ ಸಂಚಿತ ನಿಧಿಗೆ ಸುಂಕದ ಉತ್ಪನ್ನಗಳನ್ನು ಜಮೆ ಮಾಡುವುದು.**– 3ನೇ ಪ್ರಕರಣದ ಮೇರೆಗೆ ವಿಧಿಸಿದ ಉತ್ಪಾದನಾ ಸುಂಕದ ಉತ್ಪನ್ನಗಳನ್ನು ಭಾರತದ ಸಂಚಿತ ನಿಧಿಗೆ ಜಮೆ ಮಾಡತಕ್ಕುದು.

**6. ವಿನಾಯಿತಿ ಕೊಡಲು ಕೇಂದ್ರ ಸರ್ಕಾರದ ಅಧಿಕಾರ.**– ಈ ಅಧಿನಿಯಮದಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರವು ಫೀಚರ್ ಫಿಲಂನ ವಿಷಯವನ್ನು, ಅದರ ತಾಂತ್ರಿಕ ಗುಣಮಟ್ಟವನ್ನು ಮತ್ತು ಇತರ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉಪಬಂಧದಿಂದ ಆ ಫೀಚರ್ ಫಿಲಂನ್ನು ವಿನಾಯತಿಗೊಳಿಸುವುದು ಅವಶ್ಯವೆಂದು ಅಭಿಪ್ರಾಯಪಟ್ಟರೆ, ಅದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಹಾಗೆ ಮಾಡಬಹುದು.

**7. ಉತ್ಪಾದನಾ ಸುಂಕವನ್ನು ಸಂದಾಯಮಾಡದೇ ಇರುವುದಕ್ಕಾಗಿ ದಂಡ.**– ಮರುಪಾವತಿಯನ್ನು ಮಾಡಿರುವಂಥ, ಆದರೆ, 4ನೇ ಪ್ರಕರಣದ (1)ನೇ ಉಪಪ್ರಕರಣದ ಎರಡನೇ ಪರಂತುಕದ ಮೇರೆಗೆ ಕೇಂದ್ರ ಸರ್ಕಾರಕ್ಕೆ ಮರುಸಂದಾಯ ಮಾಡಲು ಅಗತ್ಯಪಡಿಸಿರುವಂಥ ಯಾವುದೇ ಉತ್ಪಾದನಾ ಸುಂಕವನ್ನೂ ಒಳಗೊಂಡು ಆ ಪ್ರಕರಣದ ಮೇರೆಗೆ ಅದಕ್ಕೆ ಫೀಚರ್ ಫಿಲಂನ ನಿರ್ಮಾಪಕನು ಸಂದಾಯ ಮಾಡಬೇಕಾದ ಯಾವುದೇ ಉತ್ಪಾದನಾ ಸುಂಕವನ್ನು ಆ ದಿನಾಂಕಕ್ಕೆ ಮುಂಚೆ ಅಥವಾ ಸಂದರ್ಭಾನುಸಾರ, ಅದರಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯೊಳಗೆ ಆ ಸರ್ಕಾರಕ್ಕೆ ಸಂದಾಯ ಮಾಡದಿದ್ದರೆ, ಸುಂಕವು ಬಾಕಿಯಾಗಿರುವುದಾಗಿ ಭಾವಿಸತಕ್ಕುದು ಮತ್ತು ಈ ಬಗ್ಗೆ ನಿಯಮಿಸಿದ ಪ್ರಾಧಿಕಾರವು ಅದು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ ಆ ನಿರ್ಮಾಪಕನಿಗೆ ಉತ್ಪಾದನಾ ಸುಂಕವು ಬಾಕಿಯಾಗಿರುವಂಥ ಅವಧಿಯಲ್ಲಿ ಪ್ರತಿ ತಿಂಗಳಿಗೆ ಐವತ್ತು ರೂಪಾಯಿಗಳಿಗೆ ಮೀರದಷ್ಟು ದಂಡವನ್ನು ವಿಧಿಸಬಹುದು:

ಪರಂತು, ಯಾವುದೇ ಅಂಥ ದಂಡವನ್ನು ವಿಧಿಸುವುದಕ್ಕೆ ಮುಂಚೆ ಅಂಥ ನಿರ್ಮಾಪಕನಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಡತಕ್ಕುದು ಮತ್ತು ವಿಚಾರಣೆಯನ್ನು ಮಾಡಿದ ತರುವಾಯ ಸದರಿ ಪ್ರಾಧಿಕಾರಕ್ಕೆ ಆ ತಪ್ಪು ಯಾವುದೇ ಒಳ್ಳೆಯ ಮತ್ತು ಸಾಕಷ್ಟು ಕಾರಣದಿಂದ ಆಗಿದ್ದಿತೆಂದು ಮನದಟ್ಟಾದರೆ ಈ ಪ್ರಕರಣದ ಮೇರೆಗೆ ಯಾವುದೇ ದಂಡವನ್ನು ವಿಧಿಸತಕ್ಕುದಲ್ಲ.

**8. ಅಧಿನಿಯಮದ ಮೇರೆಗೆ ಬಾಕಿ ಇರುವ ಮೊಬಲಗುಗಳ ವಸೂಲಿ.**– ಫೀಚರ್ ಫಿಲಂನ ಯಾವನೇ ನಿರ್ಮಾಪಕನಿಂದ ಈ ಅಧಿನಿಯಮದ ಮೇರೆಗೆ ಬಾಕಿಯಾದ ಯಾವುದೇ ಮೊಬಲಗನ್ನು (7ನೇ ಪ್ರಕರಣದ ಮೇರೆಗೆ ಸಂದಾಯಮಾಡಬೇಕಾದ ದಂಡ ಯಾವುದಾದರೂ ಇದ್ದರೆ ಅದನ್ನೂ ಒಳಗೊಂಡು) ಭೂ ಕಂದಾಯದ ಬಾಕಿಯಂತೆ ವಸೂಲು ಮಾಡುವಂಥದೇ ರೀತಿಯಲ್ಲಿ ಕೇಂದ್ರ ಸರ್ಕಾರವು ವಸೂಲು ಮಾಡಬಹುದು.

**9. ಸದ್ಭಾವನೆಯಿಂದ ಕೈಗೊಂಡ ಯಾವುದೇ ಕ್ರಮದ ಬಗ್ಗೆ ಸಂರಕ್ಷಣೆ.**– ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಸದ್ಭಾವನೆಯಿಂದ ಮಾಡಿರುವ ಅಥವಾ ಮಾಡಬೇಕೆಂದು ಉದ್ದೇಶಿಸಿರುವಂಥ ಯಾವುದೇ ಕಾರ್ಯಕ್ಕಾಗಿ ಕೇಂದ್ರ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಯಾವನೇ ಅಧಿಕಾರಿಯ ಅಥವಾ ಇತರ ನೌಕರನ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕುದಲ್ಲ.

**10. ನಿಯಮ ರಚನಾಧಿಕಾರ.**– (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಮುಖ್ಯವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು –

(ಎ) 3ನೇ ಪ್ರಕರಣದ ಮೇರೆಗೆ ಉತ್ಪಾದನಾ ಸುಂಕದ ನಿರ್ಧರಣೆ ಮತ್ತು ಸಂಗ್ರಹಣೆಯ;
(ಬಿ) 7ನೇ ಪ್ರಕರಣದ ಮೇರೆಗೆ ಯಾವುದೇ ದಂಡವನ್ನು ವಿಧಿಸಬಹುದಾದಂಥ ಪ್ರಾಧಿಕಾರದ;
(ಸಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯದ

– ಬಗ್ಗೆ ಉಪಬಂಧಿಸಬಹುದು.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕುದು ಮತ್ತು ಹಿಂದೆ ಹೇಳಿದ ಅಧಿವೇಶನವು ಅಥವಾ ಒಂದಾದಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಎರಡೂ ಸದನಗಳು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಒಪ್ಪಿದರೆ ಅಥವಾ ಎರಡೂ ಸದನಗಳೂ ಆ ನಿಯಮವನ್ನು ಮಾಡಕೂಡದೆಂದು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕುದಲ್ಲ.

*   *   *